ಸಂಕೇತ ಸಂಖ್ಯೆ : **33-K**
**Code No. : 33-K**

**CCE RR**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ ಮತ್ತು ಪದ್ಯಗಳ 53 ಅಂಕಗಳ ಒಟ್ಟಾರೆ 26 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ವ್ಯಾಕರಣಗಳ 12 ಅಂಕಗಳ ಒಟ್ಟಾರೆ 12 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 15 ಅಂಕಗಳ ಒಟ್ಟಾರೆ 7 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $8 \times 1 = 8$

1. ರಾಹುಲ್‌ರವರಿಗೆ 'ದ್ರಾವಿಡ್' ಎಂಬ ಹೆಸರು ಸೇರಲು ಕಾರಣವೇನು ?
2. ಬೇಡನು ವಿಷ ಸವರಿದ ಬಾಣಗಳನ್ನು ಏಕೆ ಸಿದ್ಧ ಮಾಡಿಕೊಂಡಿರುತ್ತಿದ್ದನು ?
3. ಭಾರತೀಯ ಸಂಗೀತದ ಎರಡು ಶೈಲಿಗಳಾವುವು ?
4. ಪುಟ್ಟರಾಜ ಗವಾಯಿಯವರು ಹಿಂದಿಗೆ ಅನುವಾದಿಸಿದ ಯಾವುದಾದರೂ ಒಂದು ಕೃತಿಯನ್ನು ಹೆಸರಿಸಿ.
5. 'ನನ್ನ ಗೋಪಾಲ' ನಾಟಕದಲ್ಲಿ ಬರುವ ಬನದ ಗೋಪಾಲ ಯಾರು ?
6. 'ನನ್ನ ಹಾಗೆಯೆ' ಕವನದಲ್ಲಿ ಮಗುವು ತನ್ನ ಅಜ್ಜನನ್ನು ಏನೆಂದು ಕೇಳಿತು ?
7. ಕನ್ನಡಿಯಂತೆ ಹೊಳೆಯುವವಳು ಯಾರೆಂದು ಜನಪದರು ಹೇಳಿದ್ದಾರೆ ?
8. ಬಸವಣ್ಣನವರ ಅಂಕಿತ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ***ಎರಡು–ಮೂರು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $11 \times 2 = 22$

9. ಗಿಳಿಯು ಇಂದ್ರನಲ್ಲಿ ಯಾವ ವರವನ್ನು ಕೇಳಿತು ?
10. 'ಗೋಡೆ' ಎಂದು ಯಾವ ಕ್ರಿಕೆಟ್ ಆಟಗಾರನನ್ನು ಕರೆಯುತ್ತಾರೆ ? ಏಕೆ ?
11. 'ಪುಟ್ಟರಾಜ ಗವಾಯಿ' ಎಂದೊಡನೆಯೇ ನಮ್ಮ ಕಣ್ಣಿನ ಮುಂದೆ ನಿಲ್ಲುವ ಚಿತ್ರ ಯಾವುದು ?
12. ಅಜ್ಜನು ಗಾಬರಿ ಮತ್ತು ಆಶ್ಚರ್ಯದಿಂದ ಪೊಲೀಸರನ್ನು ಹಿಂಬಾಲಿಸಲು ಕಾರಣವೇನು ? ನಿಮ್ಮ ಮಾತುಗಳಲ್ಲಿ ಬರೆಯಿರಿ.
13. ಅಜ್ಜನನ್ನು ರೈಲ್ವೆ ನಿಲ್ದಾಣದಿಂದ ತನ್ನ ಮನೆಗೆ ಕರೆಸಿಕೊಂಡವರು ಯಾರು ? ಏಕೆ ?
14. ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣಗಳಾವುವು ?
15. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯಗಳನ್ನು ಹೇಗೆ ಮಾಡಬೇಕೆಂದು ಹೇಳಿದ್ದಾರೆ ?
16. ಕಂದಯ್ಯ ಅತ್ತರೆ ಆಗುವ ಅಚ್ಚರಿಗಳು 'ಮಗು' ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ ?
17. ದೇವರ ಬಗೆಗಿನ ಜ್ಞಾನವಿಲ್ಲದೆ ಫಲವಿಲ್ಲವೆಂದು ತಿಳಿಸಲು ಅಕ್ಕಮಹಾದೇವಿ ನೀಡಿರುವ ನಿದರ್ಶನಗಳಾವುವು ?

18. ಕುರ್ಚಿಯ ಬಗೆಗೆ ಜೋಯಿಸರ ಹೆಂಡತಿಗೆ ಇದ್ದ ನಂಬಿಕೆ ಎಂತಹುದು ?

19. ಸಾವಿತ್ರಿಯು ಕ್ಷಮಿಸಿರೆಂದು ಮತ್ತೆ ಮತ್ತೆ ಗಂಡನಿಗೆ ಹೇಳಲು ಕಾರಣವೇನು ?

ಈ ಕೆಳಗಿನ ಮಾತು/ಸಾಲುಗಳ ಸಂದರ್ಭವನ್ನು ಸ್ವಾರಸ್ಯಸಹಿತ ಬರೆಯಿರಿ : $2 \times 3 = 6$

20. 'ನಿನ್ನಲ್ಲಿ ಹತ್ತು ಕಿಲೋವಾಟ್ ಶಕ್ತಿಯ ಬುದ್ಧಿ ಇದೆ'

21. 'ನನ್ನ ಇರುವಿಕೆಯ ಅರಿವಾಗುತ್ತದೆ'

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ ಮತ್ತು ಒಂದು ಕೃತಿಯ ಹೆಸರನ್ನು ವಾಕ್ಯಗಳಲ್ಲಿ ಬರೆಯಿರಿ : $2 \times 3 = 6$

22. ಕುವೆಂಪು

23. ಎಂ. ಗೋಪಾಲಕೃಷ್ಣ ಅಡಿಗ

24. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 3 = 3$

ಯುಗದ ________________________________________ತಂತು

______________________________ಕಳೆಯು________________

__________________________________ಚಿತ್ರದ____________

____________________________________________ಆದಳಿಂತು!

***ಅಥವಾ***

ಮೈಕೊಡವಿ ________________________________________

______________________________ದಗದಕ್ಕೆ________________

ಹೊಸತು ____________________________________________

____________________________________________ನಡೆದಂತಿದ.

ಈ ಕೆಳಗಿನ ಪ್ರಶ್ನೆಗಳಿಗೆ ***ಎಂಟು–ಹತ್ತು*** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

25. 'ಪಶ್ಚಿಮ ಘಟ್ಟಗಳ ಪತನ'ದಿಂದಾಗುತ್ತಿರುವ ಪರಿಣಾಮಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

***ಅಥವಾ***

ಪಶ್ಚಿಮ ಘಟ್ಟಗಳ ಪತನಕ್ಕೆ ಕಾರಣವಾದ ಅಂಶಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

26. ಅರ್ಜುನ ಮತ್ತು ಉತ್ತರಕುಮಾರರ ಗುಣ ಸ್ವಾಭಾವಗಳನ್ನು ಕುಮಾರವ್ಯಾಸನು ಹೇಗೆ ವರ್ಣಿಸಿದ್ದಾನೆ ? ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಅರ್ಜುನ ಮತ್ತು ಉತ್ತರಕುಮಾರರ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಹೇಳಿಕೆ ಅಥವಾ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $12 \times 1 = 12$

27. 'ಕೃತಘ್ನ' ಪದದ ವಿರುದ್ಧಾರ್ಥಕ ರೂಪ

(ಎ) ಕೃತಗ್ನ (ಬಿ) ಕೃತಜ್ಞ

(ಸಿ) ಯಜ್ಞ (ಡಿ) ಸರ್ವಜ್ಞ

28. ಒಂದೊಂದು ಎನ್ನುವುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ದ್ವಿರುಕ್ತಿ (ಬಿ) ಜೋಡುನುಡಿ

(ಸಿ) ನುಡಿಗಟ್ಟು (ಡಿ) ಅನುಕರಣಾವ್ಯಯ

29. 'ಪತ್ಯುತ್ತರ' ಸಂಧಿ ಬಿಡಿಸಿ ಬರೆದಾಗ ಪಡೆಯುವ ರೂಪ

(ಎ) ಪ್ರತಿ + ತ್ಯುತ್ತರ (ಬಿ) ಪ್ರತ್ಯು + ಉತ್ತರ

(ಸಿ) ಪ್ರತಿ + ಉತ್ತರ (ಡಿ) ಪ್ರತ್ಯು + ತ್ತರ

30. 'ಆಶ್ಚರ್ಯ' ಪದದ ತದ್ಭವ ರೂಪ

(ಎ) ಆಚ್ಚರಿಯ (ಬಿ) ಅಚ್ಚರಿ

(ಸಿ) ಬೆರಗು (ಡಿ) ಆಚ್ಚರಿಯ

31. 'ಒಕ್ಕೊರಲು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕ್ರಿಯಾ (ಬಿ) ಕರ್ಮಧಾರಯ

(ಸಿ) ಅಂಶಿ (ಡಿ) ದ್ವಿಗು

32. ಪಂಚಮೀ ವಿಭಕ್ತಿ ಪ್ರತ್ಯಯವಿದು

(ಎ) ಉ (ಬಿ) ಇಂದ

(ಸಿ) ದೆಸೆಯಿಂದ (ಡಿ) ಅಲ್ಲಿ

33. 'ಮನಶ್ಯಾ' ಪದದ ಗ್ರಾಂಥಿಕ ರೂಪವಿದು

(ಎ) ಮನಸ್ಸು (ಬಿ) ಮನುಷ್ಯ

(ಸಿ) ಮನ (ಡಿ) ಮಾನುಷ

34. ಷಟ್ಪದಿಯಲ್ಲಿ ಇರುವ ಒಟ್ಟು ಸಾಲುಗಳ ಸಂಖ್ಯೆ

(ಎ) ಆರು (ಬಿ) ಮೂರು

(ಸಿ) ನಾಲ್ಕು (ಡಿ) ಹದಿನಾರು

35. 'ಸೇನಾಸಾಗರ' ಈ ಪದದಲ್ಲಿರುವ ಅಲಂಕಾರ

(ಎ) ಉಪಮಾ (ಬಿ) ಶ್ಲೇಷ

(ಸಿ) ರೂಪಕ (ಡಿ) ದೃಷ್ಟಾಂತ

36. 'ಅಂಧ' ಪದದ ಅರ್ಥ

(ಎ) ಕುರೂಪಿ (ಬಿ) ಕಂದ

(ಸಿ) ಸುಂದರ (ಡಿ) ಕುರುಡ

37. 'ಧಾತು' ಎಂದರೆ

(ಎ) ಕ್ರಿಯಾ ಪ್ರಕೃತಿ (ಬಿ) ಪ್ರಾತಿಪದಿಕ

(ಸಿ) ನಾಮ ಪ್ರಕೃತಿ (ಡಿ) ಪ್ರಕೃತಿಭಾವ

38. ಕಾಶಿಯಲ್ಲಿ ಪ್ರಾಣಿಗಳನ್ನು ಕೊಲ್ಲುವ ಒಬ್ಬ ಬೇಡನಿದ್ದನು. ಈ ವಾಕ್ಯದಲ್ಲಿ ಬಂದಿರುವ ಅಂಕಿತ ನಾಮಪದ ಯಾವುದು ?

(ಎ) ಬೇಡ (ಬಿ) ಒಬ್ಬ

(ಸಿ) ಕಾಶಿ (ಡಿ) ಪ್ರಾಣಿ

## ವಿಭಾಗ – ಸಿ
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : $4 \times 1 = 4$

ಪ್ರಕೃತಿಯ ಅನುಗ್ರಹವಿಲ್ಲದೆ ಸುಖಜೀವನವನ್ನು ನಡೆಸಲು ಸಾಧ್ಯವಿಲ್ಲ ಎಂಬ ಅರಿವು ನಮ್ಮ ಪೂರ್ವಿಕರಿಗೆ ಇತ್ತು. ಪಂಚಭೂತಗಳಾದ ಅಗ್ನಿ, ವಾಯು, ಪೃಥ್ವಿ, ನೀರು ಹಾಗೂ ಆಕಾಶವನ್ನು ದೈವತ್ವಕ್ಕೇರಿಸಿದರು. ಬೆಳಕು ಶಾಖ ಶಕ್ತಿಯನ್ನು ಕೊಡುವ ಸೂರ್ಯನನ್ನು ತಂಪು ಶಾಂತಿ ಮುದ ನೀಡುವ ಬೆಳದಿಂಗಳನ್ನು ನೀಡುವ ಚಂದ್ರನನ್ನೂ ಪ್ರೀತಿಯಿಂದ ಗೌರವಿಸಿದರು. ಕಾಡುಮೇಡು ಗುಡ್ಡ ಪರ್ವತಗಳನ್ನು ಪೂಜಿಸುತ್ತಾ ಪ್ರಕೃತಿಯ ಆರಾಧಕರಾದರು. ಹಬ್ಬಹರಿದಿನಗಳ ಹೆಸರಿನಲ್ಲಿ ಗಿಡ, ಮರ, ಬಳ್ಳಿ, ಹೂವು, ಪ್ರಾಣಿ, ಪಕ್ಷಿಗಳನ್ನು ರಕ್ಷಿಸಿದರು. ಆಚರಣೆಯ ಹಿನ್ನೆಲೆಯಲ್ಲಿ ಸಮತೋಲನ ಆಹಾರವನ್ನು ಸೇವಿಸಿ ಆರೋಗ್ಯವಂತರಾದರು. ಹಾಡು, ಹಸೆ, ಹರಿಕತೆ, ಭಜನೆ ಮುಂತಾದವುಗಳ ಹೆಸರಿನಲ್ಲಿ ಕಲೆ ಹಾಗೂ ಸಾಹಿತ್ಯವನ್ನು ಪೋಷಿಸಿ ಬೆಳೆಸಿ ಸುಸಂಸ್ಕೃತರಾದರು.

ಪ್ರಶ್ನೆಗಳು :

39. ಪಂಚಭೂತಗಳಾವುವು ?

40. ಪೂರ್ವಿಕರು ತಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಂಡರು ?

41. ಪೂರ್ವಿಕರು ಸುಸಂಸ್ಕೃತರಾದುದು ಹೇಗೆ ?

42. ಪೂರ್ವಿಕರಿಂದ ನಾವು ಕಲಿಯಲೇಬೇಕಾದ ವಿಚಾರ ಯಾವುದು ?

43. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ***ಒಂದನ್ನು*** ಆರಿಸಿಕೊಂಡು ಸೂಕ್ತ ನಿದರ್ಶನದೊಂದಿಗೆ ಸಮರ್ಥಿಸಿ : $1 \times 3 = 3$

- ತಾನು ಕಳ್ಳ ಪರರನ್ನು ನಂಬ
- ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ ಹಾಗೆ
- ಅತಿ ಆಸೆ ಗತಿ ಕೇಡು

44. ಕಡೂರು ತಾಲ್ಲೂಕಿನ ಎಳ್ಳಂಬಳಸೆಯಲ್ಲಿರುವ ಮರುಳಸಿದ್ದೇಶ್ವರ ಪ್ರೌಢಶಾಲೆಯ 10ನೇ ತರಗತಿ 'ಬಿ' ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ನೀವು ಶ್ರೇಯಾ/ಶಶಾಂಕ ಎಂದು ಭಾವಿಸಿ, ಶಿವಮೊಗ್ಗದ ನೆಹರೂ ಬಡಾವಣೆಯ ನಿವಾಸಿಯಾದ ನಿಮ್ಮ ತಂದೆ ಮಂಜುಮೋಹನ್‌ರವರಿಗೆ ನಿಮ್ಮ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಒಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ಬೆಂಗಳೂರಿನ ಮಲ್ಲೇಶ್ವರಂ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಆದ್ಯಾ/ಆದರ್ಶ ಎಂದು ಭಾವಿಸಿ ಸೂಕ್ತ ಕಾರಣ ನೀಡಿ, ಎರಡು ದಿನ ರಜೆ ಕೊಡುವಂತೆ ಕೋರಿ ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ಅರ್ಜಿಯನ್ನು ಬರೆಯಿರಿ.

45. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧ ಬರೆಯಿರಿ : $1 \times 4 = 4$

- ಮಕ್ಕಳ ಶೋಷಣೆ
- ಕೃತಕ ಉಪಗ್ರಹ
- ಗಣರಾಜ್ಯೋತ್ಸವ